\- -

**ಸಿ.ಸಿ. ನಂ.826/2025**

**ಪಿ. ಡಬ್ಲ್ಯೂಃ 1**

**( ಇಂದು ದಿಃ04/02/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಆರೋಪಿ ಪರ ಶ್ರೀ ಪಿ ಜಿ ಎನ್ ವಕೀಲರಿಂದ,**

ನಾನು ಮೀನುಗಾರಿಕಾ ಕೋ ಅಪರೇಟಿವ್ ಸೊಸೈಟಿಯಲ್ಲಿ ಸೆಕ್ರೇಟರಿಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ಆರೋಪಿಯು ಬಂದರ ನಲ್ಲಿ ಮೀನುಗಾರಿಕೆ ಮಾಡುತ್ತಾರೆ. ನಮ್ಮ ಸೊಸೈಟಿ ಬಂದರನಲ್ಲಿದೆ. ನಮ್ಮ ಅಧೀನದಲ್ಲಿ ಡಿಸೇಲ್ ಬಂಕ್ ಇದೆ. ಕೆಲವು ಮೀನುಗಾರಿಕಾ ಬೋಟ್ ನವರು ನಮ್ಮ ಡಿಸೇಲ್ ಬಂಕ್ ನಲ್ಲಿ ಡಿಸೇಲ್ ಹಾಕುತ್ತಾರೆ. ಆರೋಪಿಯ ಬಳಿ ಬೋಟ್ ಇದೆ. ಆರೋಪಿ ಕೆಲವು ಬಾರಿ ನಮ್ಮ ಡಿಸೇಲ್ ಬಂಕ್ ನಲ್ಲಿ ಡಿಸೇಲ್ ಹಾಕುತ್ತಾರೆ. ನಾನು ಡಿಸೇಲ್ ಬಂಕ್ ನಲ್ಲಿ ಮ್ಯಾನೇಜರ್ ಆಗಿ 10 ವರ್ಷ ಕೆಲಸ ಮಾಡಿರುತ್ತೇನೆ. ಡಿಸೇಲ್ ಬಂಕ್‌ನಲ್ಲಿ ನಾನು ಮ್ಯಾನೇಜರ್ ಆದಾಗ ಆರೋಪಿಯು ಬೋಟ್ ಗೆ ಡಿಸೇಲ್ ಹಾಕಿದ್ದರು. ಕೆಲವರು ಡಿಸೇಲ್ ಅನ್ನು ಕ್ರೆಡೀಟ್ ಮೂಲಕ ಹಾಕುತ್ತಾರೆ. ಆರೋಪಿ ಸಹ ಕ್ರೇಡಿಟ್ ಮೇಲೆ ಡಿಸೇಲ್ ಹಾಕಿಸಿಕೊಂಡಿದ್ದರು. ಡಿಸೇಲ್ ಅನ್ನು ಕ್ರೇಡಿಟ್ ಗೆ ಹಾಕುವಾಗ 2 ಜಾಮೀನನ್ನು ಪಡೆಯುತ್ತೇವೆ. ಡಿಸೇಲ ಹಾಕುವಾಗ ಭದ್ರತೆಗಾಗಿ ಚೆಕ್ಕು ಪಡೆಯುುತ್ತೇವೆ ಎಂದರೆ ಸರಿಯಲ್ಲ. ದಿಃ 01.08.2024 ರಂದು ಆರೋಪಿಗೆ ನಾನು ಕೈಗಡ ಸಾಲವನ್ನು ನಮ್ಮ ಮನೆಯಲ್ಲಿ ನೀಡಿರುತ್ತೇನೆ. ಆರೋಪಿಗೆ ಕೈಗಡ ಸಾಲ ನೀಡುವಾಗ ಭದ್ರತೆಗಾಗಿ ಏನನ್ನೂ ಪಡೆಯಲಿಲ್ಲಾ. ಆರೋಪಿಗೆ ಸಾಲ ನೀಡುವಾಗ ನನ್ನ ಸ್ನೇಹಿತನಾದ ಆನಂದ ನಾಯ್ಕ ಇದ್ದರು. ಆರೋಪಿಯು ನಮ್ಮ ಸೊಸೈಟಿಯಲ್ಲಿ ಸಾಲ ಪಡೆದಿಲ್ಲಾ. ಆರೋಪಿ ನನಗೆ ಯಾವುದೇ ಕೈಗಡ ಸಾಲವನ್ನು ಕೊಡಲು ಬಾಕಿ ಇಲ್ಲಾ ಎಂದರೆ ಸರಿಯಲ್ಲ. ಆರೋಪಿ ನಮ್ಮ ಅಧೀನದಲ್ಲಿರುವ ಡಿಸೇಲ್ ಬಂಕ್ ನಿಂದ ಡಿಸೇಲ್ ಹಾಕಿಕೊಳ್ಳುತ್ತಿರುವಾಗ ಭದ್ರತೆಗಾಗಿ ಚೆಕ್ಕನ್ನು ಆರೋಪಿಯಿಂದ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಡಿಸೇಲ್ ಮೊತ್ತ ಪಾವತಿ ಮಾಡಿದ್ದರೂ ಸಹ ಭದ್ರತೆಗಾಗಿ ಪಡೆದ ಚೆಕ್ಕನ್ನು ಮರಳಿ ನೀಡಿರಲಿಲ್ಲಾ ಎಂದರೆ ಸರಿಯಲ್ಲ. ಹಣದ ದುರಾಸೆಗಾಗಿ ಚೆಕ್ಕನ್ನು ದುರುಪಯೋಗಪಡಿಸಿ ಆತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**